

# ಮರಳಿ ಬಂದಳು ಐಶ್

'ಫನ್ನೇಖಾನ್' ಚಿತ್ರ ಸಿನಿಪ್ರೇಕ್ಷಕರ ಕುತೂಹಲ ಕೆರಳಿಸುವಲ್ಲಿ ವಿಫಲವಾಗಿದೆ. ಐಶ್ವರ್ಯ ರೈ ಅಭಿನಯದ ಈ ಚಿತ್ರದ ಬಗ್ಗೆ ಉದ್ಯಮದಲ್ಲಿ ಅಂತಹ ಉತ್ಸಾಹವೂ ಕಂಡುಬಂದಿಲ್ಲ. ಜೊತೆಗೆ ಚಿತ್ರದ ನಾಯಕ ರಾಜ್‌ಕುಮಾರ್ ರಾವ್ ಜತೆಗೆ ಗ್ಲಾಮರಸ್ ನಟಿ ಐಶ್ವರ್ಯಳ ಜೋಡಿ ಕೂಡಾ ಸರಿಯಾಗಿಲ್ಲ ಎಂಬ ಟೀಕೆಗಳು ಕೇಳಿಬಂದಿವೆ. ಇದರೊಂದಿಗೆ ಮದುವೆಯಾದ ಬಳಿಕ ಮತ್ತೆ ಬಾಲಿವುಡ್‌ನಲ್ಲಿ ಮುಂಚೂಣಿಯ ನಟಿಯಾಗಿ ಮಿಂಚಬೇಕೆಂಬ ಐಶ್ವರ್ಯಾಳ ಕನಸಿಗೆ ತಣ್ಣೀರೆರಚಿದಂತಾಗಿದೆ.

ಮದುವೆಯಾದ ಬಳಿಕ ಐಶ್ವರ್ಯಾ ನಟಿಸಿದ ನಾಲ್ಕನೇ ಚಿತ್ರ ಈ ಫನ್ನೇಖಾನ್. ಗ್ಲಾಮರಸ್ ಗಾಯಕಿಯೊಬ್ಬಳು ಉದ್ಯಮದಲ್ಲಿ ಮೇಲೆ ಬರಲು ನಡೆಸುವ ಹೋರಾಟದ ಕಥೆಯಿದು. ಅದಕ್ಕೂ ಹಿಂದೆ 'ಜಜ್ಬಾ' ಎನ್ನುವ, ಕಥೆಯೇ ಕೇಂದ್ರವಾಗಿದ್ದ ಸಿನಿಮಾದಲ್ಲಿ ನಟಿಸಿದ್ದಳು. ಮಹಿಳೆಯೊಬ್ಬಳು ಅಪಹರಣಕ್ಕೆ ಒಳಗಾದ ತನ್ನ ಮಗುವನ್ನು ಹುಡುಕುವ ಕಥೆಯದು. ಎರಡೂ ಚಿತ್ರಗಳು ಫ್ಲಾಪ್ ಆದವು. ಆ ಬಳಿಕ 'ಸರಬ್‌ಜೀತ್' ಬಂತು. ಪಾಕಿಸ್ತಾನದಲ್ಲಿ ಜೈಲು ಸೇರಿದ್ದ ಸೋದರನನ್ನು ಬಿಡಿಸಿ ಕರೆತರಲು ಹೋರಾಡುವ ಹೆಣ್ಣಿನ ಪಾತ್ರ. ಅದೂ ಕೈ ಹಿಡಿಯಲಿಲ್ಲ. ರಣಬೀರ್ ಸಿಂಗ್ ಜೊತೆಗೆ ನಟಿಸಿದ 'ಯೆ ದಿಲ್ ಹೈ ಮುಷ್ಕಿಲ್' ಮಾತ್ರ ಸ್ವಲ್ಪ ಮಟ್ಟಿಗೆ ಯಶಸ್ಸು ಕಂಡಿತು. ಆದರೆ ಆ ಚಿತ್ರದಲ್ಲೂ ರಣಬೀರ್‌ನಂತಹ ಯುವಕನಿಗೆ ಐಶ್ ಸರಿ ಜೋಡಿಯಲ್ಲ ಎಂಬ ಟೀಕೆಗಳು ಕೇಳಿಬಂದವು.

ಈಗ ಅನುರಾಗ್ ಕಶ್ಯಪ್ ನಿರ್ದೇಶನದ ಹೊಸ ಚಿತ್ರ 'ಗುಲಾಬ್ ಜಾಮೂನ್'ನಲ್ಲಿ ನಟಿಸಲು ಐಶ್ವರ್ಯ ಒಪ್ಪಿದ್ದಾಳೆ. ಈ ಚಿತ್ರದಲ್ಲಿ ಆಕೆಯ ಗಂಡ ಅಭಿಷೇಕ್ ಹೀರೊ! ಗಂಡಹೆಂಡಿರು ಜತೆಯಾಗಿ ನಟಿಸಿದ ಚಿತ್ರಗಳು ಗೆದ್ದಿರುವುದು ಕಡಿಮೆಯೇ. 44ರ ಹರೆಯದಲ್ಲಿ ಐಶ್ ಸೌಂದರ್ಯ ಮತ್ತು ಮೈಕಟ್ಟನ್ನು ಉಳಿಸಿಕೊಂಡಿದ್ದಾಳೆ ಎನ್ನುವುದು ನಿಜವೇ. ಆದರೆ ಅಭಿಷೇಕ್ ವೃತ್ತಿಜೀವನವೇ ಆರಕ್ಕೇರದೆ ಮೂರಕ್ಕಿಳಿಯದಂತೆ ಇರುವಾಗ ಆತನ ಜತೆ ನಟಿಸುವ ಮೂಲಕ ಪ್ರೇಕ್ಷಕರನ್ನು ಸೆಳೆಯಲು ಐಶ್‌ಗೆ ಸಾಧ್ಯವೆ ಎನ್ನುವ ಪ್ರಶ್ನೆ ಇದೆ.

ಹಾಗೆ ನೋಡಿದರೆ ಐಶ್ವರ್ಯಾಗೆ ಈಗ 'ಬ್ರೇಕ್' ನೀಡಬಲ್ಲ ಅತ್ಯುತ್ತಮ ಕಥೆಯ ಹಾಗೂ ಗ್ಲಾಮರ್‌ಗೆ ಅವಕಾಶ ಇರುವ ಪಾತ್ರವೊಂದು ಬೇಕಾಗಿದೆ. ಮಾತ್ರವಲ್ಲ ಆಕೆಯ ಸೌಂದರ್ಯ ಮತ್ತು ಅಭಿನಯ ಪ್ರತಿಭೆಯನ್ನು ಹೊರಗೆಳೆಯಬಲ್ಲ ಸಂಜಯ್ ಲೀಲಾ ಬನ್ಸಾಲಿಯಂತಹ ನಿರ್ದೇಶಕರ ಅಗತ್ಯವಿದೆ. 1997ರಲ್ಲಿ ಮೊದಲ ಬಾರಿಗೆ ಬೆಳ್ಳಿತೆರೆಗೆ ಕಾಲಿಟ್ಟಾಗ (ಇರುವರ್) ಐಶ್ವರ್ಯಳ ಸೌಂದರ್ಯ ಮತ್ತು ಪ್ರತಿಭೆಯನ್ನು ಪ್ರೇಕ್ಷಕರ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದವರು ನಿರ್ದೇಶಕ ಮಣಿರತ್ನಂ. ಈಗ ಅಂತಹ ಪ್ರತಿಭಾವಂತ ನಿರ್ದೇಶಕರನ್ನು ಹುಡುಕಿಕೊಳ್ಳುವುದು ಐಶ್‌ಗೆ ಚಾಲೆಂಜಿಂಗ್ ಕೆಲಸವೇ ಆಗಿದೆ.

ಆರ್ಕಿಟೆಕ್ಚರ್ ವಿದ್ಯಾರ್ಥಿನಿಯಾಗಿದ್ದ ಐಶ್ ಬಯಸಿ ಚಿತ್ರರಂಗಕ್ಕೆ ಬಂದದ್ದಲ್ಲ. ಮಾಡೆಲಿಂಗ್ ಮಾಡುತ್ತಾ ವಿಶ್ವಸುಂದರಿ ಸ್ಪರ್ಧೆಯಲ್ಲಿ ಗೆದ್ದ ಬಳಿಕ ಚಿತ್ರರಂಗ ಸರಾಗವಾಗಿ ತನ್ನೊಳಗೆ ಎಳೆದುಕೊಂಡಿತು. ಈಗ ಐಶ್‌ಳ ಚಿತ್ರಜೀವನ ಕವಲುದಾರಿಯಲ್ಲಿದೆ. 'ಗುಲಾಬ್ ಜಾಮೂನ್' ಗೆಲ್ಲುವ ಚಿತ್ರವಾಗಬಹುದು ಎಂದು ಹೇಳುವ ಧೈರ್ಯವನ್ನು ಯಾರೂ ಮಾಡುತ್ತಿಲ್ಲ. ಬಹುಶಃ ಐಶ್ ಬೇಬಿ, ಕರೀನಾ ಕಪೂರ್‌ಳಿಂದ ಪಾಠ ಹೇಳಿಸಿಕೊಳ್ಳಬೇಕಾದ ಅಗತ್ಯವಿದೆ ಅನ್ನಿಸುತ್ತದೆ. ಮದುವೆ, ಮಗುವಾದ ಬಳಿಕವೂ ಕರೀನಾ ಬಾಲಿವುಡ್‌ನಲ್ಲಿ ಗಮನಸೆಳೆಯುವಂತಹ ಚಿತ್ರ ನೀಡಿದ್ದಾಳೆ ಎನ್ನುವುದು ನಿಸ್ಸಂಶಯ.

■ ಬಿಂದು

